## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸ್ವ-ಸಹಾಯ ಗುಂಪುಗಳಿಗೆ ಅವುಗಳ ಸ್ವಾತಂತ್ರ್ಯಗಳಿಸಲು ಸಾಧ್ಯವಾಗಲು ಹಾಗೂ ತಮ್ಮ ಉದ್ಯಮಶೀಲತೆಯನ್ನು ಮತ್ತಷ್ಟು ವೃದ್ಧಿಪಡಿಸಿಕೊಳ್ಳುವುದಕ್ಕಾಗಿ ತಲಾ ರೂ.1.50 ಲಕ್ಷಗಳ ನೆರವನ್ನು ಒದಗಿಸುವ ಕುರಿತು.

ಓದಲಾಗಿದೆ: 1. ಮಾನ್ಯ ಮುಖ್ಯಮಂತ್ರಿಯವರ ಆಯವ್ಯಯ ಭಾಷಣದ ಕಂಡಿಕೆ 204 (ಅ) ರಲ್ಲಿ ಘೋಷಿಸಿರುವ ಕುರಿತು.

2. ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಇವರ ಏಕಕಡತ ಸಂಖ್ಯೆ:ಕೆಎಸ್‌ಆರ್‌ಎಲ್‌ಪಿಎಸ್/ಅನುದಾನ/01/2022-23

*******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಮಾನ್ಯ ಮುಖ್ಯಮಂತ್ರಿಗಳು 2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 204 (ಅ) ರಲ್ಲಿ "**ಆಯ್ದ ಸ್ವ-ಸಹಾಯ ಸಂಘಗಳಿಗೆ ಅವುಗಳು ಆರ್ಥಿಕ ಸ್ವಾತಂತ್ರ್ಯಗಳಿಸಲು ಸಾಧ್ಯವಾಗಲು ಹಾಗೂ ತಮ್ಮ ಉದ್ಯಮಶೀಲತೆಯನ್ನು ಮತ್ತಷ್ಟು ವೃದ್ಧಿಪಡಿಸಿಕೊಳ್ಳುವುದಕ್ಕಾಗಿ ತಲಾ 1.5 ಲಕ್ಷ ರೂ.ಗಳ ನೆರವನ್ನು ಒದಗಿಸಲಾಗುವುದು. ಇದಕ್ಕಾಗಿ ಪ್ರಸಕ್ತ ವರ್ಷದಲ್ಲಿ 500 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಗುಂಪುಗಳಿಗೆ ವಿಶೇಷ ಆದ್ಯತೆಯನ್ನು ನೀಡಲು 50 ಕೋಟಿ ರೂ.ಗಳ ಮೊತ್ತದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಇದರಿಂದ ಸುಮಾರು 3.9 ಲಕ್ಷ ಮಹಿಳೆಯರಿಗೆ ಅನುಕೂಲವಾಗಲಿದೆ**" ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರಲ್ಲಿ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯಡಿ ಅನುಷ್ಠಾನಗೊಳಿಸುತ್ತಿರುವ ಎನ್.ಆರ್.ಎಲ್.ಎಂ. ಮತ್ತು ಎನ್.ಆರ್.ಇ.ಟಿ.ಪಿ ಯೋಜನೆಗಳಡಿ ಸ್ವ-ಸಹಾಯ ಗುಂಪುಗಳಿಗೆ ರೂ.1.50 ಲಕ್ಷಗಳ ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗುತ್ತಿದ್ದು, 2014-15ನೇ ಸಾಲಿನಿಂದ 2021-22ನೇ ಸಾಲಿನವರೆಗೂ 91,254 ಸ್ವ-ಸಹಾಯ ಗುಂಪುಗಳಿಗೆ ರೂ.870.50 ಕೋಟಿಗಳ ಸಮುದಾಯ ಬಂಡವಾಳ ನಿಧಿಯನ್ನು ಒದಗಿಸಲಾಗಿರುತ್ತದೆ. ಎನ್.ಆರ್.ಎಲ್.ಎಂ.ನ ಎಂ.ಐ.ಎಸ್ ತಂತ್ರಾಂಶದಲ್ಲಿ 2,19,227 ಸ್ವ-ಸಹಾಯ ಗುಂಪುಗಳು ಲಭ್ಯವಿದ್ದು, ಇದರಲ್ಲಿ91,254 ಗುಂಪುಗಳಿಗೆ ಈಗಾಗಲೇ ಸಮುದಾಯ ಬಂಡವಾಳ ನಿಧಿ ಬಿಡುಗಡೆಯಾಗಿದ್ದು, ಬಾಕಿ 1,27,973 ಸ್ವಸಹಾಯ ಗುಂಪುಗಳಿಗೆ ರೂ.1919.59 ಕೋಟಿಗಳ ಸಮುದಾಯ ಬಂಡವಾಳ ನಿಧಿ ಅವಶ್ಯಕತೆಯಿರುತ್ತದೆ.

2022-23 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 30,800 ಸ್ವ-ಸಹಾಯ ಗುಂಪುಗಳಿಗೆ ತಲಾ ರೂ.1.50 ಲಕ್ಷದಂತೆ ಒಟ್ಟು ರೂ.462.00 ಕೋಟಿಗಳ ಸಮುದಾಯ ಬಂಡವಾಳ ನಿಧಿ ಬಿಡುಗಡೆಗೆ ಯೋಜನೆ ರೂಪಿಸಲಾಗಿದ್ದು, 2022-23 ನೇ ಸಾಲನ್ನು **ಜೀವನೋಪಾಯ ವರ್ಷವೆಂದು** ಘೋಷಿಸಿರುವುದರಿಂದ ಹೆಚ್ಚುವರಿ ಅನುದಾನ ರೂ.38 ಕೋಟಿಗಳನ್ನು ಸೇರಿಸಿ ಒಟ್ಟು ರೂ.500.00 ಕೋಟಿಗಳ ಸಮುದಾಯ ಬಂಡವಾಳ ನಿಧಿಯನ್ನು 33,333 ಸ್ವ- ಸಹಾಯ ಗುಂಪುಗಳಲ್ಲಿನ 1,66,665 ಮಹಿಳಾ ಸದಸ್ಯರುಗಳ ಆರ್ಥಿಕ ಸ್ವಾತಂತ್ರ್ಯಗಳಿಸಲು ಸಾಧ್ಯವಾಗಲು ಹಾಗೂ ತಮ್ಮ ಉದ್ಯಮಶೀಲತೆಯನ್ನು ಮತ್ತಷ್ಟು ವೃದ್ಧಿಪಡಿಸುವ ಸಲುವಾಗಿ ಹೆಚ್ಚುವರಿ ಅನುದಾನ ರೂ.38 ಕೋಟಿಗಳ ಸಮುದಾಯ ಬಂಡವಾಳ ನಿಧಿಯನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡುವಂತೆ ಅಭಿಯಾನ ನಿರ್ದೇಶಕರು, ಸಂಜೀನಿನಿ-ಕೆಎಸ್‌ಆರ್‌ಎಲ್‌ಪಿಎಸ್ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

...2/-

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 39 ಕೌಗುಇ 2022, ಬೆಂಗಳೂರು ದಿನಾಂಕ: 13-04-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಆಯವ್ಯಯ ಭಾಷಣದ ಕಂಡಿಕೆ 204(ಅ) ರಲ್ಲಿ ಘೋಷಿಸಿರುವಂತೆ, 2022-23 ನೇ ಸಾಲಿನ ಆಯವ್ಯಯದಲ್ಲಿ ಎನ್‌ಆರ್‌ಎಲ್‌ಎಂಗೆ ನಿಗಧಿಪಡಿಸಿರುವ ಅನುದಾನದಿಂದ ತಯಾರಿಸಿದ ಕ್ರಿಯಾ ಯೋಜನೆಯಡಿಯಲ್ಲಿಯೇ ಸದರಿ ಕಾರ್ಯಕ್ರಮವನ್ನು ಸೇರಿಸಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 284 ವೆಚ್ಚ-9/2022, ದಿನಾಂಕ:11-04-2022 ಹಾಗೂ ಯೋಜನಾ ಇಲಾಖೆಯ ಟಿಪ್ಪಣಿ ಸಂ:ಪಿಡಿಎಸ್/44/ಎಂಇಡಿ/2022, ದಿನಾಂಕ: 11-04-2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

13/04/2022

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

**ಇವರಿಗೆ:-**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ 10 ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.

1. ಮಹಾಲೇಖಪಾಲರು (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
2. ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
3. ಖಜಾನಾಧಿಕಾರಿ, ರಾಜ್ಯಹುಜೂರ್ ಖಜಾನೆ, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಎನ್.ಎಂ.ಸಿ., ಖನಿಜ ಭವನ, ರೇಸ್‌ಕೋರ್ಸ್ ರೋಡ್, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3&9), ವಿಧಾನಸೌಧ, ಬೆಂಗಳೂರು.
6. ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಜನಶಕ್ತಿ & ಉದ್ಯೋಗ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.

....3/

2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿ ಕಟ್ಟಡಗಳ, ಬೆಂಗಳೂರು.
3. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿ ಕಟ್ಟಡಗಳ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ, ಬಹುಮಹಡಿ ಕಟ್ಟಡಗಳ, ಬೆಂಗಳೂರು.
5. ಅಧೀಕ್ಷರು, ಶಾಖೆ-I ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ & ಜೀವನೋಪಾಯ ಇಲಾಖೆ.
6. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.